ಆ) ಹೌದು.

ಇ) ಹೌದು.

ಈ) ಕಾನೂನು ಪ್ರಕಾರ ದೊರಕಬೇಕಾದ ಸೌಲಭ್ಯಗಳು ಅಂದರೆ ಸಂಬಳ ಸಹಿತ ರಜೆ, ಬೋನಸ್, ಹೆರಿಗೆಭತ್ಯೆ ರಜೆ, ಮುಂತಾದವುಗಳ ಜೊತೆಗೆ ವಸತಿ ಸೌಲಭ್ಯ, ವೈದ್ಯಕೀಯ ಸೌಲಭ್ಯಗಳು, ವಿದ್ಯಾರ್ಥಿವೇತನ, ಮುಂತಾದ ಸೌಲಭ್ಯಗಳನ್ನು ಕೇಂದ್ರ ಸರ್ಕಾರದ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ ಕಲ್ಯಾಣ ಆಯುಕ್ತರ ಮೂಲಕ ಒದಗಿಸಲಾಗುತ್ತಿದೆ.

ಉ) ಪ್ರತಿ 1000 ಬೀಡಿ ಸುತ್ತಲು ನಿಗದಿಯಾಗಿರುವ ವೇತನ ರೂ. 11-50, ಮತ್ತು

ಒಪ್ಪಂದದ ಪ್ರಕಾರ ತಾತ್ಕಾಲಿಕ ಪರಿಹಾರ ರೂ.1-55 ಹೆಚ್ಚಳ.

ತುಟ್ಟಿಭತ್ಯೆ ರೂ. 5-16

ಒಟ್ಟು ರೂ. 18.21

ರಾಜ್ಯದ ಬಾಲ ಕಾರ್ಮಿಕರು

1700 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು;

ಆ) 1988ರಿಂದ 1990ನೇ ಡಿಸೆಂಬರ್ ಅಂತ್ಯದವರೆಗೆ ಬಾಲ ಕಾರ್ಮಿಕರ ಕಾರ್ಯಗಳಿಗಾಗಿ ಸರ್ಕಾರ ಎಷ್ಟು ಹಣ ವಿಚ್ರ್ಯುಮಾಡಿದೆ;

ಇ) ರಾಜ್ಯದಲ್ಲಿರುವ ಬಾಲ ಕಾರ್ಮಿಕರು ಎಷ್ಟು; ಬಾಲ ಕಾರ್ಮಿಕರನ್ನು ಆ ವ್ಯಾಪ್ತಿಗೆ ಹೋಗದಂತೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಕಾರ್ಮಿಕ ಇಲಾಖೆಯಿಂದ ಯಾವುದೇ ಕಲ್ಯಾಣ ಕಾರ್ಯಕ್ರಮ ಬಾಲ ಕಾರ್ಮಿಕರಿಗಾಗಿ ಇರುವುದಿಲ್ಲ. ಆದರೆ ಬಾಲ ಕಾರ್ಮಿಕರನ್ನು ಉದ್ದಿಮೆದಾರರು ಹಾಗೂ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ನೇಮಿಸಿಕೊಂಡು ಕೆಲಸ ಮಾಡಿಸುವ ಸಂದರ್ಭದಲ್ಲಿ ಅವರ ಸಂಬಳ ವಾರದ ರಜೆ ಪ್ರತಿನಿತ್ಯ ಕೆಲಸ ಮಾಡುವ ಸಮಯದ ಬಗ್ಗೆ ನಿಷೇಧ ಹಾಗೂ ನಿರ್ಬಂಧಗಳು ಕೆಲವು ಕಾರ್ಮಿಕ ಕಾಯ್ದೆಗಳಲ್ಲಿ ಅಂದರೆ 1) ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 2) ಕಾರ್ಖಾನೆಗಳ ಕಾಯ್ದೆ, 3) ಸಾರಿಗೆ ಕಾರ್ಮಿಕರ ಕಾಯ್ದೆ, 4) ತೋಟ ಕಾರ್ಮಿಕರ ಕಾಯ್ದೆ, 5) ಬೀಡಿ ಮತ್ತು ಸಿಗಾರ್ ಕೆಲಸಗಾರರ ಕಾಯ್ದೆ ಮುಂತಾದವುಗಳಲ್ಲಿದೆ.

ಆ) ಇಲ್ಲ.

ಇ) 1981ರ ಜನಗಣತಿ ಅಂಕಿ ಅಂಶಗಳ ಪ್ರಕಾರ ಇಡೀ ರಾಜ್ಯದಲ್ಲಿ 9,66,339 ಬಾಲ ಕಾರ್ಮಿಕರಿದ್ದಾರೆ.

ಬಾಲ ಕಾರ್ಮಿಕರ ಬಗ್ಗೆ ಇರುವ ಕಾರ್ಮಿಕ ಕಾಯ್ದೆಗಳನ್ನು ಜಾರಿಗೊಳಿಸಲಾಗುತ್ತಿದೆ.